# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

# ಎಸ್.ಸಿ. ನಂಃ 29/2023

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ರುಹೀದ್ ಪಾಶಾ | ಫ್ರಾಸಾಃ | 07 |
| **ತಂದೆಯ ಹೆಸರುಃ** | ಇಮಾನ್ ಸಾಬ್ | ಚಾಸಾಃ | 06 |
| **ವಯಸ್ಸುಃ** | 24 | ಪ್ರಮಾಣ ವಚನ ಭೋದಿಸಿದ ದಿನಾಂಕ: | 23-09-2025 |
| **ಉದ್ಯೋಗಃ** | ಕೂಲಿ | | |
| **ವಾಸ ಸ್ಥಳಃ** | ಚಿಂತಾಮಣಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ(ಆರೋಪಿಯನ್ನು ವಿಸಿ ಮುಖಾಂತರ ಹಾಜರುಪಡಿಲಾಗಿದೆ)**

ನನಗೆ ಆರೋಪಿ ಗೊತ್ತು. ಚಾಸಾ-1 ನನ್ನ ತಂಗಿ. 3 ವರ್ಷದ ಹಿಂದೆ ಆರೋಪಿ ನನ್ನ ತಂಗಿಯನ್ನು ಪ್ರೀತಿಮಾಡಿ ಕರೆದುಕೊಂಡು ಹೋಗಿ ಅತ್ಯಾಚಾರ ಮಾಡಿರುತ್ತಾನೆ. ಈ ವಿಚಾರ ನನ್ನ ತಂಗಿ ತಿಳಿಸಿದ್ದಳು. 1 ತಿಂಗಳು ನನ್ನ ತಂಗಿ ಕಾಣೆಯಾಗಿದ್ದಳು. ಚೇಳೂರು ಧರ್ಮಸ್ಥಳ , ತಿರುಪತಿ , ಬೆಂಗಳೂರಿನಲ್ಲಿ ಹೋಟೇಲ್ ಗಳಲ್ಲಿ ಇರಿಸಿದ್ದಾಗಿ ತಿಳಿಸಿದ್ದಳು. ಆತ ಆಕೆಯ ಮೇಲೆ ಹಲ್ಲೆ ಮಾಡಿದ್ದ. ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ವಿ.ಆರ್.ವಕೀಲರಿಂದ ಪಾಟೀ ಸವಾಲು**

3 ವರೆ ವರ್ಷದ ಹಿಂದೆ ಹೇಳಿಕೆ ನೀಡಿರುತ್ತೇನೆ. ಆಗ ಮೇಲೆ ಹೇಳಿದ್ದ ಎಲ್ಲಾ ವಿಚಾರ

ತಿಳಿಸಿದ್ದೇನೆ. ನಾನು ಆರೋಪಿಯನ್ನು ಮುಂಚೆ ನೋಡಿಲ್ಲ ಎಂದರೆ ಸರಿಯಲ್ಲ. ಆತನ ವಿಚಾಸ ಹಾಗೂ ತಂದೆ ತಾಯಿಯ ಬಗ್ಗೆ ಗೊತ್ತಿಲ್ಲ. ನನ್ನ ತಂಗಿ ವಿದ್ಯಾವಂತೆ. ಎಲ್ಲ ವಿಚಾರ ತಂಗಿಯಿಂದ ನನಗೆ ತಿಳಿದಿದೆ ಎಂದರೆ ಸರಿ. ಚಾಸಾ-1 ರವರು ಹೇಳಿದಷ್ಟು ಮಾತ್ರ ಗೊತ್ತು. ನನ್ನ ತಂಗಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ಚಾಸಾ-1 ರವರನ್ನು ಚೇಳೂರು ಲಾಡ್ಜ್ ಹಾಗೂ ಬೆಂಗಳೂರಿನಲ್ಲಿ ಅತ್ಯಾಚಾರ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂಗಿ ಬುದ್ಧಿವಂತಳು. ಒಳಿತು ಕೆಡುಕುಗಳ ಅರಿವು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿಯನ್ನು ಮುಸಲ್ಮಾನ ಜಾತಿಗೆ ಮತಾಂತರ ಮಾಡಿಸಲು ಬಲವಂತ ಮಾಡಿದ್ದು , ಆತ ಒಪ್ಪದ ಕಾರಣ ಸುಳ್ಳು ಕೇಸು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ..... ಇಲ್ಲ .....**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ23.09.2025

**(ಕೆ.ಎಂ.ರಾಜಶೇಖರ)**

ಸ್ಥಳಃ ಚಿಂತಾಮಣಿ

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.